


ಈಗ ಅವರೆಲ್ಲಿರಬಹುದು? ಅವರು ಮೇಜಿನ ಡ್ರಾ ತೆರೆಯುತ್ತಾರೆ. ರಿಜಿಸ್ಟರ್ ನೋಡುತ್ತಾರೆ. ನಿನ್ನೆಯವರೆಗೆ ವಿದ್ಯಾರ್ಥಿಗಳು ಮತ್ತು ಮೇಸ್ಟ್ರ ಹಾಜರಿಯನ್ನು ಹಾಕಲಾಗಿದೆ.

ಮಕ್ಕಳು ಈಗ ಕೂತಿದ್ದಾರೆ, ಅವರ ತುಂಟತನ ನಿಂತಿದೆ. ಆದರೆ ಅವರು ಪರಸ್ಪರ ತಳ್ಳಿಕೊಳ್ಳುವುದು, ನಾಲಿಗೆ ತೋರಿಸುವುದು, ಚಿಗುಟುವುದು ಮಾತ್ರ ಇನ್ನೂ ನಡೆದೇ ಇದೆ.

ಇದನ್ನೆಲ್ಲಾ ನೋಡಿದ ಲಾಮೂ ಭಾಯಿ ಮಕ್ಕಳಿಗೆ ಹೇಳುತ್ತಾರೆ, 'ಎಲ್ಲರೂ ಚಕ್ಕಳ-ಬಕ್ಕಳ ಹಾಕಿ ಕೂರಿ...'

ನಿರೀಕ್ಷಕರ ಮಾತು ಅರ್ಥವಾಗಲಿಲ್ಲ ಎಂಬಂತೆ ಮಕ್ಕಳು ಪರಸ್ಪರ ನೋಡಿಕೊಳ್ಳುತ್ತಾರೆ. ನಿರೀಕ್ಷರು ಸ್ವತಃ ಕೆಳಗೆ ಕೂತು ಚಕ್ಕಳಬಕ್ಕಳ ಹಾಕುವುದನ್ನು ತೋರಿಸುತ್ತಾರೆ. ಮಕ್ಕಳಿಗೂ ಹೀಗೆ ಕೂರುವಂತೆ ಹೇಳುತ್ತಾರೆ. ಮಕ್ಕಳು ಮೆಲ್ಲ-ಮೆಲ್ಲನೆ ಅವರನ್ನು ಅನುಕರಣೆ ಮಾಡುತ್ತಾರೆ.

'ಕಣ್ಣುಗಳನ್ನು ಮುಚ್ಚಿಕೊಳ್ಳಿ...' ನಿರೀಕ್ಷಕರು ಹೇಳುತ್ತಾರೆ.

ಮಕ್ಕಳ ಕಣ್ಣುಗಳು ಮುಚ್ಚಿಕೊಳ್ಳುತ್ತವೆ; ನಂತರ ಸ್ವಲ್ಪ ತಡೆದು ತೆರೆದುಕೊಳ್ಳುತ್ತವೆ. ಲಾಮೂ ಭಾಯಿ ಈಗ ಧೈರ್ಯ ವಹಿಸುತ್ತಾರೆ. ಒಬ್ಬೊಬ್ಬರಂತೆ ಎಲ್ಲಾ ಮಕ್ಕಳಿಗೂ ತಿಳಿ ಹೇಳುತ್ತಾರೆ. ಅವರ ಮನಸ್ಸಿಗೆ ಹಿಡಿಸುವಂತೆ ಮಾತನಾಡುತ್ತಾರೆ. ಅವರ ತಲೆಯನ್ನು ಪ್ರೀತಿಯಿಂದ ನೇವರಿಸುತ್ತಾರೆ. ಮುಗುಳ್ನಗುತ್ತಾ, ಪ್ರೀತಿಯಿಂದ ಮಾತನಾಡಿಸುತ್ತಾರೆ. ಅವರ ಹೆಸರನ್ನು ಕೇಳುತ್ತಾರೆ. ಅವರ ಕುಟುಂಬದ ಬಗ್ಗೆ ಕೇಳುತ್ತಾರೆ. ಏನು ಊಟ ಮಾಡಿದಿರಿ? ದಿನವಿಡೀ ಏನು ಮಾಡುತ್ತೀರ? ಮುಂತಾದ ಪ್ರಶ್ನೆಗಳನ್ನು ಕೇಳುತ್ತಾರೆ. ಮಕ್ಕಳು ಉತ್ಸಾಹದಿಂದ ಉತ್ತರಿಸುತ್ತಾರೆ. ನಿರೀಕ್ಷಕರು ಒಂದು ಗಂಟೆಯ ಅವಧಿಯಲ್ಲಿ ಮಕ್ಕಳೊಂದಿಗೆ